ಕಾರ್ಕಳದಿಂದ ಮೈಸೂರಿಗೆ ಸಾರಿಗೆ ಬಸ್ ವ್ಯವಸ್ಥೆ.

2044(2668)

ಶ್ರೀ ಗೋಪಾಲ ಬಂಡಾರಿ ಹೆಚ್(ಕಾರ್ಕಳ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀಕ್ಷೇತ್ರ ಧರ್ಮಸ್ಥಳದಿಂದ ಹೊರಡುವ ಅನೇಕ ಬಸ್ಸುಗಳು ಕಾರ್ಕಳ ಉಡುಪಿ ಮಾರ್ಗದಿಂದ ಸಂಚರಿಸುತ್ತಿದ್ದು ಕಾರ್ಕಳದಲ್ಲಿ ನಿಲುಗಡೆ ಇರುವುದಿಲ್ಲ ಎಲ್ಲಾ ಬಸ್ಸುಗಳು ಕಾರ್ಕಳ ಬೈಪಾಸ್ ಮಾರ್ಗದಲ್ಲಿ ಸಂಚರಿಸುತ್ತಿದ್ದು ಅಲ್ಲಿ (ಬೈಪಾಸ್)ಯೇ ಒಂದು ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣ ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆಯೆ;

ಆ) ಕಾರ್ಕಳದಿಂದ ಮೈಸೂರಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸು ಸಂಚರಿಸುತ್ತಿದುದ್ದನ್ನು ನಿಲ್ಲಿಸಲು ಕಾರಣವೇನು; ಮುಂದೆ ಪ್ರಾರಂಭಿಸಲಾಗುವುದೆ?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ಶ್ರೀಕ್ಷೇತ್ರ ಧರ್ಮಸ್ಥಳದಿಂದ ಆಚರಣೆಯಾಗುತ್ತಿರುವ ಎಲ್ಲಾ ಸಾರಿಗೆಗಳು ದೂರ ಮಾರ್ಗದ ಸಾರಿಗೆಗಳಾಗಿದ್ದು ಇವೆಲ್ಲವು ಕಾರ್ಕಳ ಪಟ್ಟಣದ ಮುಖೇನ ಆಚರಣೆಯಾಗುತ್ತಿವೆ. ಗುರುವಾಯನ ಕೆರೆಯಿಂದ ಉಡುಪಿ ಮಾರ್ಗ ಕಾರ್ಕಳ ಮುಖೇನದ ರಸ್ತೆಯು ರಾಷ್ಟ್ರೀಕೃತವಲ್ಲದ ವಲಯದಲ್ಲಿದೆ. ಸರ್ಕಾರದ ಮುಂದೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆವತಿಯಿಂದ ಕಾರ್ಕಳ ಬೈಪಾಸ್ ರಸ್ತೆಯಲ್ಲಿ ಬಸ್ಸು ನಿಲ್ದಾಣವನ್ನು ನಿರ್ಮಿಸುವ ಪ್ರಸ್ತಾವನೆಯು ಇರುವುದಿಲ್ಲ.

ಆ) ಮೈಸೂರು-ಕಾರ್ಕಳ ಸಾರಿಗೆಯನ್ನು ಸಾರಿಗೆ ಆದಾಯದ ಕೊರತೆಯಿಂದಾಗಿ ರದ್ದುಗೊಳಿಸಲಾಯಿತು. ಪುನಃ ಈ ಸಾರಿಗೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮುಂದೆ ಇರುವುದಿಲ್ಲ.

ರಾಜ್ಯದಲ್ಲಿ ಹೊಸ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಬಗ್ಗೆ.

2045(1877)

ಶ್ರೀ ಗೋಪಾಲ ಪೂಜಾರಿ(ಬೈಂದೂರು): ಮಾನ್ಯ ಮಹಿಳಾ ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು?